# ದುಡ್ಡು ದೊಡ್ಡದಪ್ಪ..!

# ಪ್ರಶ್ನೋತ್ತರ

**ಸಿ ಎಸ್ ಸುಧೀರ್,** ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿಡಾಟ್ ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.

ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianmoney.com

## ಕಾರು ಖರೀದಿಗೆ ಎಷ್ಟು ಸಾಲ ಮಾಡಬೇಕು...?

**1.) ನಾನು ಮೈಸೂರು ನಿವಾಸಿ ಸತೀಶ್. ನನ್ನ ವಾರ್ಷಿಕ ಆದಾಯ 6 ಲಕ್ಷ ರೂಪಾಯಿ ಇದ್ದು, 13 ಲಕ್ಷ ಮೌಲ್ಯದ ಹೊಸ ಕಾರನ್ನು ಸಾಲ ಮಾಡಿ ಖರೀದಿಸುವ ಯೋಜನೆ ಮಾಡಿದ್ದೇನೆ. 2 ಲಕ್ಷ ಡೌನ್ ಪೇಮೆಂಟ್ ಮಾಡಿ ಇನ್ನುಳಿದ 11 ಲಕ್ಷ ಲೋನ್ ಮಾಡಿದ್ರೆ ಅದು ಸರಿಯಾದ ನಿರ್ಧಾರವೇ ತಿಳಿಸಿ.**

ಯಾವುದೇ ವಸ್ತು ಅಥವಾ ಆಸ್ತಿಯ ಖರೀದಿಗೆ ಸಾಲ ಮಾಡುವಾಗ ನಾವು ಸಾಕಷ್ಟು ಎಚ್ಚರಿಕೆ ವಹಿಸಬೇಕು. ಯಾವ ಸಾಲ ನಮ್ಮ ಸಂಪತ್ತನ್ನು ವೃದ್ಧಿಸುತ್ತದೋ ಅದು ಒಳ್ಳೆಯ ಸಾಲವಾಗುತ್ತದೆ. ಯಾವ ಸಾಲ ನಮ್ಮ ಸಂಪತ್ತನ್ನು ಕಡಿತಗೊಳಿಸುತ್ತದೋ ಅದು ಕೆಟ್ಟ ಸಾಲವಾಗುತ್ತದೆ. ನನ್ನ ಮಾತಿನಿಂದ ನಿಮಗೆ ಬೇಸರವಾಗಬಹುದು. ಆದರೆ ಖಂಡಿತವಾಗಿಯೂ ಸಾಲ ಮಾಡಿ ತುಪ್ಪ ತಿನ್ನಬಾರದು. ಯಾವುದೇ ವ್ಯಕ್ತಿ ತನ್ನ ವಾರ್ಷಿಕ ಆದಾಯಕ್ಕಿಂತ ಹೆಚ್ಚು ಸಾಲ ಮಾಡಿ ಕಾರು ಖರೀದಿಸಿದರೆ ಆತನ ಆರ್ಥಿಕ ಸ್ಥಿತಿ ದಿಕ್ಕುಪಾಲಾಗುತ್ತದೆ. ವರ್ಷಕ್ಕೆ 6 ಲಕ್ಷ ರೂಪಾಯಿ ಆದಾಯ ಗಳಿಸೋ ವ್ಯಕ್ತಿ ಯಾವುದೇ ಕಾರಣಕ್ಕೂ ಸಾಲ ಮಾಡಿ 13 ಲಕ್ಷ ಮೌಲ್ಯದ ಕಾರು ಖರೀದಿ ಮಾಡುವ ಯೋಜನೆ ಮಾಡಬಾರದು. ಹೆಚ್ಚೆಂದರೆ 6 ಲಕ್ಷ ರೂಪಾಯಿ ಸಾಲ ಮಾಡಿ ನೀವು ಹೊಸ ಕಾರು ಖರೀದಿ ಮಾಡಬಹುದು. ಒಂದೊಮ್ಮೆ ನೀವು ಅಂದುಕೊಂಡಂತೆ 11 ಲಕ್ಷ ಸಾಲ ಮಾಡಿ ಕಾರು ಖರೀದಿಸಿದ್ರೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತೀರಿ. ಸಾಲ ಮರು ಪಾವತಿ , ಕಾರ್ ಇನ್ಶೂರೆನ್ಸ್ ರಿನಿವಲ್, ಮೆಂಟೇನೆನ್ಸ್ , ಟ್ರಾವಲಿಂಗ್ ಅಂತ ಖರ್ಚಿನ ಮೇಲೆ ಖರ್ಚು ಬರುತ್ತಿರುತ್ತೆ. ಇದರ ಜತೆಗೆ ನಿಮ್ಮ ಕುಟುಂಬ ನಿರ್ವಹಣೆಯ ಜವಾಬ್ದಾರಿವೂ ಇರತ್ತೆ. ಆಗ ನೀವು ಹಣಕಾಸು ಹೊಂದಿಸಲು ಪರದಾಡುವ ಸ್ಥಿತಿ ಬಂದು ಕಾರನ್ನೇ ಮಾರಾಟ ಮಾಡುವ ಸ್ಥಿತಿ ಬಂದುಬಿಡಬಹುದು. ನಾವು ಹೂಡಿಕೆ ಮಾಡುವ ಸಾಲದ ಹಣದಿಂದ ಹೆಚ್ಚು ದುಡ್ಡು ಉತ್ಪಾತ್ತಿಯಾಗುತ್ತದೆ ಎಂಬ ಖಾತ್ರಿ ಇದ್ದಾಗ ಮಾತ್ರ ನಮ್ಮ ವಾರ್ಷಿಕ ಆದಾಯಕ್ಕಿಂತ ಹೆಚ್ಚು ಸಾಲ ಮಾಡಬೇಕು. ಇಲ್ಲದಿದ್ದಲ್ಲಿ ಸಾಲವೇ ನಿಮಗೆ ಶೂಲವಾಗಿಬಿಡಬಹುದು. ಅದು ಹೇಗೆ ಎನ್ನುವುದನ್ನು ಈ ಟೇಬಲ್ ನಲ್ಲಿ ಗಮನಿಸಿ.

| ಕಾರ್ ಲೋನ್ ಮಾಡುವ ಮುನ್ನ ಗಮನಿಸಿ....! | |
|---|---|
| ಕಾರ್ ಲೋನ್ ಮೊತ್ತ | 11 ಲಕ್ಷ ರೂಪಾಯಿ |
| ಬಡ್ಡಿ ದರ | ಶೇ. 10 ರಷ್ಟು |
| ಸಾಲ ಮರುಪಾವತಿ ಅವಧಿ | 7 ವರ್ಷ ( 84 ತಿಂಗಳು) |
| ಮಾಸಿಕ ಕಂತು(EMI) | 18,262 ರೂಪಾಯಿ |
| ಸಾಲಕ್ಕೆ ಕಟ್ಟುವ ಒಟ್ಟು ಬಡ್ಡಿ | 4,33,950 ರೂಪಾಯಿ |

**2) ನಾನು ಬೆಂಗಳೂರು ನಿವಾಸಿ ಚೇತನ್. ನನ್ನ ಹತ್ತಿರ 2 ಲಕ್ಷ ಹಣವಿದೆ. ನಾನು ಅದನ್ನು ಎಫ್ ಡಿ ( ಫಿಕ್ಸೆಡ್ ಡೆಪಾಸಿಟ್ ) ಮಾಡಿಸಲೇ ಅಥವಾ ಎನ್ ಎಸ್ ಸಿ ಸರ್ಟಿಫಿಕೆಟ್ ಅಥವಾ ಪಬ್ಲಿಕ್ ಪ್ರಾವಿಡೆಂಟ್ ಫಂಡ್ (ಪಿಪಿಎಫ್) ನಲ್ಲಿ ತೊಡಗಿಸಲೇ?**

ಕಬ್ಬಿಣದ ಕಡಲೆ ಬಿಡಿ, ಸುಲಿದ ಬಾಳೆಯ ಹಣ್ಣು ಹಿಡಿ ಎಂಬ ಮಾತನ್ನು ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಯಾವುದು ನಮಗೆ ಸ್ಪಷ್ಟ ಹಾಗು ಸರಳ ಅನಿಸುತ್ತದೋ ಅಲ್ಲಿಯೇ ಹಣ ಹೂಡಿಕೆ ಮಾಡಬೇಕು ಎನ್ನುವುದು ವಾರನ್ ಬಫೆಟ್ ಸಲಹೆ. ನಾನು ಕೂಡ ಇದನ್ನೇ ಪುನರುಚ್ಚರಿಸುತ್ತೇನೆ. ಒಂದೇ ಕಡೆ ನಮ್ಮ ಹಣವನ್ನು ಹೂಡಿಕೆ ಮಾಡುವುದು ತಪ್ಪು ನಿರ್ಧಾರವಾಗುತ್ತದೆ. ನಿಮ್ಮ ಪ್ರಶ್ನೆ ಬಗ್ಗೆ ಹೇಳುವುದಾದರೆ ನಿಮಗೆ ತಕ್ಷಣಕ್ಕೆ ಹಣ ಅಗತ್ಯವಿದ್ದಲ್ಲಿ ಹೆಚ್ಚಿನ ಹಣವನ್ನು ಎಫ್ ಡಿ (ಫಿಕ್ಸೆಡ್ ಡೆಪಾಸಿಟ್) ನಲ್ಲಿ ಇಡಿ. ಒಂದೊಮ್ಮೆ ನೀವು ದೀರ್ಘಕಾಲಿಕ ಹೂಡಿಕೆ ಮಾಡಬಹುದು ಎಂದಾದಲ್ಲಿ ಪಬ್ಲಿಕ್ ಪ್ರಾವಿಡೆಂಟ್ ಫಂಡ್ (ಪಿಪಿಎಫ್) ಅಥವಾ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೆಟ್ ನಲ್ಲಿ ( ಎನ್ ಎಸ್ ಸಿ) ಹೂಡಿಕೆ ಮಾಡಿ . ಪಿಪಿಎಫ್ ಮತ್ತು ಎನ್ ಎಸ್ ಸಿ ತುಂಬಾ ಸ್ಥಿರವಾದ ಆಕರ್ಷಕ ಹೂಡಿಕೆ ಯೋಜನೆ. ಸಣ್ಣ ಹೂಡಿಕೆದಾರರಿಗೆ ಇದು ವರದಾನ. ಏಕೆಂದರೆ ಬೇರೆ ಹೂಡಿಕೆಗಳಿಗೆ ಹೋಲಿಸಿದರೆ ಇದರಲ್ಲಿ ರಿಸ್ಕ್ ಕಡಿಮೆ ಪ್ರತಿಫಲ ಹೆಚ್ಚು. ಬ್ಯಾಂಕ್ ಗಳಲ್ಲಿ ಎಫ್ ಡಿ ಇಟ್ಟರೆ ಸುಮಾರು 6 ರಿಂದ 7 ಪರ್ಸೆಂಟ್ ಬಡ್ಡಿ ಸಿಕ್ಕರೆ ಹೆಚ್ಚು. ಆದರೆ ಪಿಪಿಎಫ್ ನಲ್ಲಿ 7.8 ರಿಂದ 8 ರಷ್ಟು ಬಡ್ಡಿ ಸಿಗುತ್ತದೆ. ಹೀಗಾಗಿ ಪಿಪಿಎಫ್ ಆಕರ್ಷಕ ಹೂಡಿಕೆಯಾಗಿದೆ.

**3.) ನಾನು ಚಿಕ್ಕಮಗಳೂರು ನಿವಾಸಿ ರವಿ . 32 ವರ್ಷದ ನಾನು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು 1 ಕೋಟಿ ಮೊತ್ತದ ಟರ್ಮ್ ಲೈಫ್ ಇನ್ಶೂರೆನ್ಸ್ ಪಡೆದುಕೊಳ್ಳಲು ಬಯಸಿದ್ದೇನೆ. ಒಂದು ಕೋಟಿ ಮೊತ್ತದ ಲೈಫ್ ಟರ್ಮ್ ಇನ್ಶೂರೆನ್ಸ್ ಗೆ ಪ್ರೀಮಿಯಂ ಎಷ್ಟು ಬರುತ್ತದೆ ?**

ರವಿಯವರೆ ಟರ್ಮ್ ಲೈಫ್ ಇನ್ಶೂರೆನ್ಸ್ ನಿಜಕ್ಕೂ ಇಂದಿನ ಅಗತ್ಯ. ಆಧುನಿಕ ಜೀವನ ಶೈಲಿಯ ಓಟದಲ್ಲಿ ಕುಟುಂಬದ ಆರ್ಥಿಕ ಭದ್ರತೆಯನ್ನು ನೋಡಿಕೊಳ್ಳುವ ದೊಡ್ಡ ಹೊಣೆಗಾರಿಕೆಯನ್ನು ಟರ್ಮ್ ಲೈಫ್ ಇನ್ಶೂರೆನ್ಸ್ ನಿಭಾಯಿಸುತ್ತದೆ. ಭಾರತದಲ್ಲಿ ಬಹುತೇಕ ಮಂದಿಗೆ ಎಂಡೋಮೆಂಟ್ ಪಾಲಿಸಿಗಳ ಬಗ್ಗೆ ಗೊತ್ತಿದೆ. ಆದ್ರೆ ಟರ್ಮ್ ಲೈಫ್ ಇನ್ಶೂರೆನ್ಸ್ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಪಾಲಿಸಿದಾರರು ಆಕಸ್ಮಿಕ ಸಾವಿನ ವಿರುದ್ಧ ಪಡೆಯುವ ವಿಮೆ ರಕ್ಷಣೆ ಸೌಲಭ್ಯವನ್ನು 'ಟರ್ಮ್ ಇನ್ಶುರನ್ಸ್' ಯೋಜನೆ ಒಳಗೊಂಡಿರುತ್ತದೆ. ನೀವು ನಂಬಿದವರನ್ನ ನಿಮ್ಮ ಮರಣದ ನಂತರವೂ ಹಣಕಾಸಿನ ಸಂಕಷ್ಟದಿಂದ ಪಾರು ಮಾಡುವ ವಿಶಿಷ್ಟ ಪಾಲಿಸಿಯೇ ಟರ್ಮ್ ಇನ್ಶೂರೆನ್ಸ್. ಇದರಂತೆ ಪಾಲಿಸಿ ಅವಧಿಯಲ್ಲಿ ಒಂದು ವೇಳೆ ಪಾಲಿಸಿದಾರನು ಮೃತಪಟ್ಟರೆ, ಗರಿಷ್ಠ ಮೊತ್ತದ ವಿಮಾ ಸುರಕ್ಷತೆಯನ್ನು ಇದು ಖಾತರಿಪಡಿಸುತ್ತದೆ. ಟರ್ಮ್ ಇನ್ಶೂರೆನ್ಸ್ ಅತ್ಯಂತ ಅಗ್ಗ ಮತ್ತು ಉತ್ತಮವಾದ ಜೀವ ವಿಮೆ.

ವರ್ಷಕ್ಕೆ ಸುಮಾರು 10 ರಿಂದ 13 ಸಾವಿರ ರೂಪಾಯಿ ಪ್ರೀಮಿಯಂ ಪಾವತಿಸಿದರೆ ನೀವು ಸುಮಾರು 1 ಕೋಟಿ ಮೊತ್ತದ ಟರ್ಮ್ ಇನ್ಶೂರೆನ್ಸ್ ಪಡೆದುಕೊಳ್ಳಬಹುದು. ನಿಮಗೆ ಈಗ 32 ವರ್ಷವಾಗಿರೋದ್ರಿಂದ ನೀವು 75 ವರ್ಷಗಳ ವರೆಗೆ ಟರ್ಮ್ ಲೈಫ್ ಇನ್ಶೂರೆನ್ಸ್ ಪಾಲಿಸಿ ಮಾಡಿಸಿಕೊಳ್ಳಬಹುದು. ದುಡಿಯೋಕೆ ಶುರು ಮಾಡಿದಾಗ್ಲೇ ಟರ್ಮ್ ಇನ್ಶೂರೆನ್ಸ್ ಬಗ್ಗೆ ಯೋಚಿಸಿದ್ರೆ ನಿಮಗೆ ಸಿಗುವ ಇನ್ಶೂರೆನ್ಸ್ ಕವರೇಜ್ ಪ್ರಮಾಣ ಹೆಚ್ಚು. ನೀವು ಟರ್ಮ್ ಇನ್ಶೂರೆನ್ಸ್ ಪಾಲಿಸಿ ನೀಡುವ ಕಂಪನಿಗಳನ್ನು ಸಂಪರ್ಕಿಸಿದರೆ ನಿಮ್ಮ ಅಗತ್ಯಕ್ಕೆ ಅನುಗುಣವಾಗಿ ಇನ್ನಷ್ಟು ಮಾಹಿತಿ ಸಿಗುತ್ತದೆ.

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111

IndianMoney.com™
Be Wise, Get Rich